ಸಹಕಾರಿ ಕಾನೂನು ಪ್ರಕಾರ ಲೆಕ್ಕ ಪತ್ರಗಳ ಮರು ಪರಿಶೋಧನೆ.

212. ಶ್ರೀ ಬಿ. ಶಿವರಾಮು (ಗಂಡಸಿ):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಸಹಕಾರಿ ಕಾನೂನು ಪ್ರಕಾರ ಮರುಲೆಕ್ಕ ಪರಿಶೋಧನಾ ಇಲಾಖೆಯಲ್ಲಿ ಅವಕಾಶವಿದೆಯೆ ?

2) ಯಾವುದಾದರೂ ಪ್ರಕರಣದಲ್ಲಿ ಮರುಲೆಕ್ಕ ಪರಿಶೋಧನೆ ನಡೆದಿದೆಯೇ ?

3) ನಡೆದಿದ್ದಲ್ಲಿ, ಯಾವ ಆಧಾರ ಅಥವಾ ಕಾನೂನು ಪ್ರಕಾರ ನಡೆದಿದೆ ?

4) ಹಾಸನ ಇಂಜಿನೀಯರಿಂಗ್ ಮತ್ತು ಟೆಕ್ನೀಷಿಯನ್ ಸೊಸೈಟಿಯ ಲೆಕ್ಕಾಚಾರದ ವರದಿಯನ್ನು ಮರು ಲೆಕ್ಕಾಚಾರ ಪರಿಶೋಧನೆಗೆ ಒಳಪಡಿಸಲಾಗಿದೆಯೆ ?

5) ಒಳಪಡಿಸಿದ್ದಲ್ಲಿ, ಆದರ ವರದಿಯನ್ನು ಒದಗಿಸಲಾಗುವುದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

1) ಇದೆ.

2) ನಡೆದಿದೆ.

3) ಸಹಕಾರ ಸಂಘಗಳ ಆಡಳಿತ ಮಂಡಳಿಯಿಂದ ಅಥವಾ ಸದಸ್ಯರಿಂದ ಬಂದ ದೂರುಗಳ ಆಧಾರದ ಮೇಲೆ ಹಿಂದಿನ ಆಡಿಟ್ ವರದಿಗಳಲ್ಲಿ ಗುರುತರ ನ್ಯೂನತೆಗಳು ಮೇಲ್ನೋಟಕ್ಕೆ ಕಂಡುಬಂದಲ್ಲಿ ಸರ್ಕಾರ ಅಂತಹ ಪ್ರಕರಣಗಳಲ್ಲಿ ಮರು ಲೆಕ್ಕ ಪರಿಶೋಧನೆಗೆ ಆದೇಶ ನೀಡಿರುತ್ತೆ. ಸಹಕಾರ ಸಂಘಗಳ ಕಾಯ್ದೆ ಕಾಲಂ 63 ರ ಅನ್ವಯ ಲೆಕ್ಕ ಪರಿಶೋಧನೆ ಮಾಡಲು ಇರುವ ಅಧಿಕಾರ ಮರು ಲೆಕ್ಕ ಪರಿಶೋಧನೆ ಮಾಡಲೂ ಸಹ ಅನ್ವಯವಾಗುತ್ತದೆ ಎಂದು ನ್ಯಾಯಾಲಯಗಳು ತಿಳಿಸಿವೆ.

4) ಮರು ಲೆಕ್ಕ ಪರಿಶೋಧನೆ ಮಾಡಬೇಕೆ ಅಥವಾ ಬೇಡವೇ ಎಂಬುದಕ್ಕೆ ಮರು ಪರಿಶೀಲನೆ ಮಾಡಲಾಗುತ್ತಿದೆ.

5) ಮರು ಲೆಕ್ಕ ಪರಿಶೋಧನೆ ಆಗದೇ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎ.ಟಿ. ರಾಮಸ್ವಾಮಿ (ಶ್ರೀ ಬಿ. ಶಿವರಾಮುರವರ ಪರವಾಗಿ):– ಉಪಾಧ್ಯಕ್ಷಿಣಿಯವರೆ, ಹಾಸನದ ಇಂಜಿನಿಯರಿಂಗ್ ಮತ್ತು ಟೆಕ್ನೀಷಿಯನ್ ಸೊಸೈಟಿಯ ಲೆಕ್ಕಾಚಾರದ ವರದಿಯ ಮರುಲೆಕ್ಕ ಪರಿಶೋಧನೆಯಾಗಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಮರು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರತಕ್ಕಂಥ ನ್ಯೂನತೆಗಳ ಬಗ್ಗೆ ಸಮಜಾಯಿಷಿ ಕೇಳಿ ಸಂಬಂಧಪಟ್ಟವರಿಗೆ ನೋಟೀಸನ್ನು ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಉಪಾಧ್ಯಕ್ಷಿಣಿಯವರೆ, ಅವರು ಮೊದಲ ಪ್ರಶ್ನೆಯಾಗಿ ಮರುಲೆಕ್ಕಪರಿಶೋಧನೆಯನ್ನು ಮಾಡಲು ಅವಕಾಶವಿದೆಯೆ ಎಂದು ಕೇಳಿದ್ದರು. ಅದಕ್ಕೆ ನಿಯಮ 63ರ ಪ್ರಕಾರ ಮರು ಲೆಕ್ಕಪರಿಶೋಧನೆ ಮಾಡಲು ಅವಕಾಶವಿದೆ ಎಂದು ನಾವು ಉತ್ತರವನ್ನು ಕೊಟ್ಟಿದ್ದೇವೆ. ಇದರಲ್ಲಿ ಏನು ಮಾಡಿದ್ದಾರೆಂದರೆ ರೀ ವೆರಿಫಿಕೇಷನ್ ಮಾಡಿದ್ದಾರೆ. ನಾಲ್ಕನೆಯ ಪ್ರಶ್ನೆಯಾದ Audit and Accounts are under re–verification. Before a decision is taken for re–Auditing.

ರೀ ವೆರಿಫಿಕೇಷನ್ ಎಂದರೆ ರೀಆಡಿಟ್ ಅಲ್ಲ, ರೀ ಆಡಿಟ್ ಎಂದರೆ ಮೊದಲಿನಿಂದಲೂ ಕಡೆಯವರೆಗೆ ಎಲ್ಲವನ್ನು ನೋಡಬೇಕಾಗುತ್ತದೆ. ಆದರೆ ರೀ–ವೆರಿಫಿಕೇಷನ್ ಎಂದರೆ ಒಂದೆರಡು ಸಣ್ಣಪುಟ್ಟ ತಪ್ಪುಗಳನ್ನು ತಿದ್ದುಪಡಿ ಮಾಡಿ ಪುನಃ ತೀರ್ಮಾನವನ್ನು ಕೊಡುತ್ತಾರೆ. ಅದಕ್ಕಾಗಿ ಆ ಪ್ರಶ್ನೆ ಇಲ್ಲಿ ಬರುವುದಿಲ್ಲ.

ಶ್ರೀ ಎ.ಟಿ. ರಾಮಸ್ವಾಮಿ:– ಮರುಲೆಕ್ಕಪರಿಶೋಧನೆಯಾಗಿಲ್ಲವೆಂದು ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದ್ದೀರಿ, ಆದರೆ ಇಲ್ಲಿ ಮರು ಲೆಕ್ಕಪರಿಶೋಧನೆಯಾಗಿದೆ, ಸಂಬಂಧಪಟ್ಟವರಿಗೆ ಅದರ ಬಗ್ಗೆ ಸಮಜಾಯಿಷಿ ಕೇಳಿ ನೋಟೀಸನ್ನು ಕೊಟ್ಟಿದ್ದಾರೆ. ಮರು ಲೆಕ್ಕಪರಿಶೋಧನೆಯನ್ನು ಮಾಡದೆ ಸಂಬಂಧಪಟ್ಟವರಿಗೆ ಸಮಜಾಯಿಷಿ ನೋಟೀಸನ್ನು ಕೊಡಲು ಹೇಗೆ ಸಾಧ್ಯವಾಗುತ್ತದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಉಪಾಧ್ಯಕ್ಷಿಣಿಯವರೇ, ರೀ–ವೆರಿಫಿಕೇಷನ್ ಮಾಡುವುದಕ್ಕೆ ಮಾತ್ರ ಕೊಟ್ಟಿದ್ದೇವೆ.

ಶ್ರೀ ಎ.ಟಿ. ರಾಮಸ್ವಾಮಿ:– ಉಪಾಧ್ಯಕ್ಷಿಣಿಯರೇ, 1984–85, 85–86, 86–87ನೇ ಇಸವಿಯಲ್ಲಿ ಹಾಸನದ ಇಂಜಿನಿಯರಿಂಗ್ ಮತ್ತು ಟೆಕ್ನೀಷಿಯನ್ ಸೊಸೈಟಿಯಲ್ಲಿ ಮರು ಲೆಕ್ಕ ಪರಿಶೋಧನೆಯಲ್ಲಿ ಕಂಡುಬಂದಿರತಕ್ಕಂಥ ನ್ಯೂನತೆಗಳ ಬಗ್ಗೆ ಸಮಾಜಾಯಿಷಿಯನ್ನು ಕೇಳಿ ಈಗಾಗಲೇ 30–10, 31–10, 2–11–92ರಲ್ಲಿ ಸಂಬಂಧಪಟ್ಟವರಿಗೆ ನೋಟೀಸನ್ನು ಜಾರಿ ಮಾಡಿದ್ದಾರೆ. ಮರು ಲೆಕ್ಕಪರಿಶೋಧನೆಯಾಗದೆ ಅವರಿಗೆ ಹೇಗೆ ನೋಟೀಸನ್ನು ಜಾರಿ ಮಾಡಿದರು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಅದರ ಬಗ್ಗೆ ಪ್ರಶ್ನೆಯೇ ಬಂದಿಲ್ಲ. ತಾವು ಈಗ ಕೇಳಿದ್ದಕ್ಕೆ ಬೇಕಾದರೆ ಮಾಹಿತಿಯನ್ನು ತರಿಸಿಕೊಂಡು ಪುನಃ ಉತ್ತರವನ್ನು ಕೊಡುತ್ತೇನೆ. ಏಕೆಂದರೆ ತಾವು ಕೇಳಿದ ಪ್ರಶ್ನೆಗೆ ಮಾತ್ರ ಇಲ್ಲಿ ಉತ್ತರವನ್ನು ತಮ್ಮ ಮುಂದಿಡಬೇಕಾಗುತ್ತದೆ. ನನಗೆ ತಾವು ಹಾಕಿರತಕ್ಕ ಪ್ರಶ್ನೆಗೆ ಉತ್ತರ ಇಷ್ಟೆ, ಆದರೆ ನೋಟೀಸನ್ನು ಕೊಟ್ಟು ಈಗಾಗಲೆ ಪ್ರಾರಂಭ ಮಾಡಿದ್ದಾರೆ ಎಂದು ಹೇಳುತ್ತಿದ್ದೀರಿ, ಅದರ ಬಗ್ಗೆ ಉತ್ತರದಲ್ಲಿ ಇಲ್ಲ, ಬೇಕಾದರೆ ತರಿಸಿಕೊಡುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ:– ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಹಾಸನ ಇಂಜಿನಿಯರಿಂಗ್ ಮತ್ತು ಟೆಕ್ನೀಷಿಯನ್ ಸೊಸೈಟಿಯ ಲೆಕ್ಕಪರಿಶೋಧನೆಯು ಸರಿಯಾಗಿ ಆಗದೆ, ಆಡೀಟರ್ಸ್‌ಗಳು ಮತ್ತು ಸಂಬಂಧಪಟ್ಟ ಕಾರ್ಯದರ್ಶಿಯವರು ಒಂದಾಗಿ ಸುಮಾರು 70–80 ಸಾವಿರ ರೂಪಾಯಿಗಳ ಅವ್ಯವಹಾರವನ್ನು ಮುಚ್ಚಿ ಹಾಕಿದ್ದಾರೆಂದು ಹೇಳಿ ಅಧ್ಯಕ್ಷರು ಮತ್ತು ಇನ್ನೂ ಕೆಲವು ಸಾರ್ವಜನಿಕರು ಇಲಾಖೆಗೆ ದೂರನ್ನು ಕೊಟ್ಟರು. ಆ ದೂರನ್ನು ಕೊಟ್ಟ ಮೇಲೆ ರೀ–ಆಡಿಟ್ ಆಗಿದೆ. ಅದು ಆದಮೇಲೆ ಸುಮಾರು 85 ಸಾವಿರ ರೂಪಾಯಿಗಳ ಅವ್ಯವಹಾರವಾಗಿರುವುದು ನಿಜವೆಂದು ಕಂಡುಬಂದಿದೆ. ಈ ರೀತಿ ಹಾಸನದ ಇಂಜಿನಿಯರಿಂಗ್ ಮತ್ತು ಟೆಕ್ನೀಷಿಯನ್ ಸೊಸೈಟಿಯಲ್ಲಿ ದುರ್ವ್ಯವಹಾರವಾಗಿ ಎರಡನೆಯ ಸಲ ಆಡಿಟ್ ರಿಪೋರ್ಟ್‌ನ್ನು ಆಡಿಟ್ ಮಾಡಿ ಸಂಬಂಧ ಪಟ್ಟ ಡೆಪ್ಯೂಟಿ ಡೈರೆಕ್ಟರ್‌ಗೆ ಕೊಟ್ಟಿದ್ದಾರೆ. ಇದು ನನಗೆ ಬಂದಿರತಕ್ಕ ಖಚಿತವಾದ ವರ್ತಮಾನ. ವಿಚಾರ ಹೀಗಿದ್ದರೂ ಕೂಡ ಮಾನ್ಯ ಸಚಿವರು ನೋಟೀಸನ್ನು ಕೊಟ್ಟಿದ್ದಾರೆ, ವೆರಿಫಿಕೇಷನ್ ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಅವರು ರೀ–ಆಡಿಟ್‌ಗೆ ಅವಕಾಶವಿದೆ ಎಂದು ಹೇಳಿದ್ದಾರೆ. ಅದಕ್ಕೆ ನಾನು ಬಹಳ ಸಂತೋಷಪಡುತ್ತೇನೆ. ಇಲ್ಲದಿದ್ದರೆ ಮೆನೇಜ್‌ಮೆಂಟ್ ಕಮಿಟಿಯವರು ಮತ್ತು ಆಡಿಟ್ ಮಾಡಲು ಹೋಗುವವರು ಇಬ್ಬರೂ ಕೂಡ ಒಂದಾಗಿ ಎಲ್ಲವನ್ನು ಮೇಯುತ್ತಾರೆ. ನಮ್ಮ ಹಾಸನದಲ್ಲಿ ಸುಮಾರು ಹತ್ತಾರು ಸೊಸೈಟಿಗಳಲ್ಲಿ ಈ ರೀತಿಯ ವ್ಯವಹಾರ ನಡೆಯುತ್ತಿದೆ. ಅಲ್ಲಿನ ರಿಜಿಸ್ಟ್ರಾರ್ ಮತ್ತು ಡೆಪ್ಯೂಟಿ ರಿಜಿಸ್ಟ್ರಾರ್‌ರವರು ಇಬ್ಬರೂ ಇದರಲ್ಲಿ ಏಜೆಂಟ್ಸ್ ಆಗಿದ್ದಾರೆಂದು ಕೇಳಿ ಬರುತ್ತಿದೆ. ಒಂದು ಸಾರಿ ಆಡಿಟ್ ಆದ ಮೇಲೆ ಪುನಃ ರೀ ಆಡಿಟ್ ಮಾಡಿದಾಗ ಮಿಸ್ ಅಪ್ರೋಪ್ರಿಯೇಷನ್ ಆಗಿರತಕ್ಕದ್ದು

ಕಂಡುಬಂದರೆ ಅಂಥ ಆಡಿಟರ್‌ಗಳನ್ನು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಆ ತಕ್ಷಣದಿಂದಲೇ ಆ ಇಲಾಖೆಯಲ್ಲಿ ಇಟ್ಟುಕೊಳ್ಳುವುದಕ್ಕೆ ಅವಕಾಶವನ್ನು ಕೊಡಬಾರದು. ಇದು ಏನಾಗಿದೆ ಎಂದರೆ ಯಾರ್ಯಾರದ್ದೋ ವ್ಯವಹಾರ, ಯಾರ್ಯಾರದ್ದೋ ಹಣ, ಯಾರ್ಯಾರೋ ದುಡ್ಡು ಹೊಡೆದುಕೊಂಡು ಹೋಗತಕ್ಕದ್ದು ಮಾಡುತ್ತಿದ್ದಾರೆ. ಯಾರ್ಯಾರಿಗೋ ರಿಬೇಟ್ ಕೊಡುತ್ತಿದ್ದಾರೆ. ಇದರಲ್ಲಿ ಏನಾದರೂ ನ್ಯಾಯ ಇದೆಯೆ ? ಇಂಥ ವಿಚಾರದಲ್ಲಿ ಹೇಳುವವರು ಕೇಳುವವರು ಯಾರಾದರೂ ಇದ್ದಾರೆಯೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ರೀ ಆಡಿಟ್‌ಗೆ ಪ್ರಾವಿಷನ್ ಇದೆ ಎಂದು ನಾನೇ ಹೇಳಿದ್ದೇನೆ. ತಪ್ಪಿತಸ್ಥರನ್ನು ಬಿಡತಕ್ಕ ಪ್ರಶ್ನೆಯೇ ಇಲ್ಲ. ಯಾರಾದರೂ ತಪ್ಪಿತಸ್ಥರಿದ್ದರೆ ಅವರು ಶಿಕ್ಷೆಗೆ ಗುರಿಯಾಗುತ್ತಾರೆ. ತಪ್ಪು ಮಾಡಿದ್ದರೆ ನಾವು ಅವರನ್ನು ಬಿಡುವುದಿಲ್ಲ. ಎಲ್ಲಾದರೂ ಯಾರಾದರೂ ತಪ್ಪು ಮಾಡಿದ್ದರೆ ಅದನ್ನು ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದರೆ ಅದರ ಬಗ್ಗೆ ಮತ್ತೆ ವೆರಿಫಿಕೇಷನ್ ಮಾಡಿಸಿ ಪನಿಷ್‌ಮೆಂಟ್ ಮಾಡಿಸುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ:– ನಾನು ಕೊನೆಯದಾಗಿ ಒಂದು ಪ್ರಶ್ನೆಯನ್ನು ಕೇಳಿ ಮುಗಿಸುತ್ತೇನೆ. ನಾವು ಇಲ್ಲಿ ಯಾವುಯಾವುದಕ್ಕೋ ಕಾಲವನ್ನು ವ್ಯಯ ಮಾಡುತ್ತಿದ್ದೇವೆ. ಅನ್ಯಾಯವಾಗಿರುವುದನ್ನು ಕಂಡು ಹಿಡಿದು ಅದನ್ನು ಸರಿಪಡಿಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಬೇಕು. ಈ ದೇಶದಲ್ಲಿ ರೈತರು ಬದುಕಲಿ ಎಂದು ನಾವು ಏನಾದರೂ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋದರೆ ಅದಕ್ಕೆ ಕಾಲದ ಮಿತಿಯನ್ನು ತೋರಿಸಿದರೆ ನಾವು ಏನು ಮಾಡಬೇಕು ?

ಶ್ರೀ ಎ.ಟಿ. ರಾಮಸ್ವಾಮಿ:– ಯಾರು ದುಡ್ಡು ಹೊಡೆದಿದ್ದಾರೆ, ಯಾರು ತಪ್ಪು ಮಾಡಿದ್ದಾರೆ ಅವರನ್ನು ಹಿಡಿದು ನೇಣು ಹಾಕಬೇಕೆಂಬ ದೃಷ್ಟಿಯಿಂದಲೇ ಈ ಪ್ರಶ್ನೆಯನ್ನು ಕೇಳಿರತಕ್ಕದ್ದು. ಯಾರನ್ನೂ ಷೀಲ್ಡ್ ಮಾಡಬೇಕೆಂಬ ದೃಷ್ಟಿಯಿಂದ ಕೇಳುತ್ತಿಲ್ಲ. ಯಾರ ಪರವಾಗಿಯೋ ಯಾರೋ ಪ್ರಶ್ನೆಯನ್ನು ಕೇಳುತ್ತಾರೆಂದರೆ ಆಗುವುದಿಲ್ಲ. ಸದಸ್ಯರು ಸದನದಲ್ಲಿ ಗೈರು ಹಾಜರಾಗತಕ್ಕ ಅನೇಕ ಸಂದರ್ಭಗಳಲ್ಲಿ ಇನ್ನೊಬ್ಬ ಮಾನ್ಯ ಸದಸ್ಯರಿಗೆ ವಹಿಸಿಕೊಟ್ಟು ಹೋಗುತ್ತಾರೆ. ಅವರು ಈ ಸದಸ್ಯರ ಪರವಾಗಿ ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ಆದ್ದರಿಂದ ಯಾರದ್ದೋ ಪ್ರಶ್ನೆ, ಯಾರದ್ದೋ ಉತ್ತರ ಎನ್ನತಕ್ಕದ್ದು ಸರಿಯಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ:– ನಾನು ಆ ಮಾತನ್ನೇ ಆಡಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ:– ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ. ರೀ ಆಡಿಟ್‌ಗೆ ಅವಕಾಶ ಇದೆಯೆ ? ಇದು ಆಗಿದೆಯೆ ? ಮರು ಲೆಕ್ಕಪರಿಶೋಧನೆ ಮಾಡಬೇಕೇ ಬೇಡವೇ ಎಂಬ ಬಗ್ಗೆ ನಾವು ಪರಿಶೀಲನೆ ಮಾಡುತ್ತಿದ್ದೇವೆಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಮರು ಲೆಕ್ಕಪರಿಶೋಧನೆಯನ್ನು ನಾವು ಮಾಡಿಲ್ಲವೆಂದು ಅವರು ಹೇಳಿದ್ದಾರೆ. ಆದರೆ ಮರು ಲೆಕ್ಕಪರಿಶೋಧನೆ ಆಗಿರತಕ್ಕ ವರದಿ ನಮ್ಮ ಮುಂದಿದೆ. ಅವರು ಈ ಸಭೆಗೆ ಮತ್ತು ಈ ಸದನದ ಮುಖಾಂತರ ಸಾರ್ವಜನಿಕರಿಗೆ ತಪ್ಪು ಉತ್ತರವನ್ನು ಕೊಟ್ಟಿದ್ದಾರೆಂದು ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಯಾರು ಈ ಮರು ಲೆಕ್ಕಪರಿಶೋಧನೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟರು ? ಯಾವತ್ತು ಕೊಟ್ಟರು ? ಮರು ಲೆಕ್ಕ ಪರಿಶೋಧನೆ ಮಾಡುವುದಕ್ಕೆ ಆದೇಶ ಏನಾದರೂ ಆಗಿದೆಯೇ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಈಗಾಗಲೇ ನಾನು ಹೇಳಿದ್ದೇನೆ. ನನ್ನ ಹತ್ತಿರ ಇದಕ್ಕೆ ಸಂಬಂಧಪಟ್ಟಂತೆ ಸಂಪೂರ್ಣವಾದ ಮಾಹಿತಿ ಇಲ್ಲ. ಅದನ್ನು ತರಿಸಿಕೊಡುತ್ತೇನೆಂದು ತಿಳಿಸಿದ್ದೇನೆ. ಆದರೆ ರೀ ಆಡಿಟ್ ಮಾಡುವುದಕ್ಕೆ ಪ್ರಾವಿಷನ್ ಇಲ್ಲ ಎಂಬುದನ್ನು ನಾನು ಅಲ್ಲಗೆಳೆಯುತ್ತೇನೆ. ಸೆಕ್ಷನ್

63ರ ಪ್ರಕಾರ ರೀ ಆಡಿಟ್ ಮಾಡಬಹುದೆಂದು ಹೈಕೋರ್ಟ್ ಈಗಾಗಲೇ ತೀರ್ಪು ನೀಡಿದೆ. ನಾನು ತಮ್ಮ ಗಮನಕ್ಕೆ ತರುವುದಾದರೆ ಹಾಸನ ಇಂಜಿನಿಯರಿಂಗ್ ಮತ್ತು ಟೆಕ್ನೀಷಿಯನ್ ಸಹಕಾರ ಸಂಘಗಳ ನಿಯಮಿತ ಇದರ 83–84ರಿಂದ 86–87ನೇ ಸಾಲುಗಳವರೆಗಿನ ಲೆಕ್ಕ ಪರಿಶೋಧನೆಯ ನ್ಯೂನತೆಗಳನ್ನು ಸದರೀ ಸಂಘದ ಅಧ್ಯಕ್ಷರು ಇಲಾಖೆಯ ಗಮನಕ್ಕೆ ತಂದು ಇದನ್ನು ಸರಿಪಡಿಸಲು ಕೋರಿದಂತೆ ಹಾಗೂ ಈ ವಿಷಯವು ಅಂದಾಜು ಸಮಿತಿಯ ಸಭೆಯಲ್ಲಿ ಚರ್ಚೆಗೆ ಬಂದಿರುವುದರಿಂದ ಸದರೀ ಸಂಘದ 83–84ರಿಂದ 86–87ನೇ ಸಾಲಿನ ಲೆಕ್ಕಗಳನ್ನು ಮರುಪರಿಶೀಲನೆಗೆ ಅಳವಡಿಸಿದುದು ಸದರೀ ಮರುಪರಿಶೀಲನೆಯಲ್ಲಿ ಕಂಡುಬಂದ ವ್ಯತ್ಯಾಸಗಳನ್ನು ಬಿಡುಗಡೆ ಮಾಡಲಾಗಿರುವ 89–90ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಅಳವಡಿಸಿರುವುದರಿಂದ ಇದರ ಬಿಡುಗಡೆಗೆ ಸೂಕ್ತ ವ್ಯವಸ್ಥೆ ಮಾಡಲಾಗಿದೆ. ಈಗ ಈ ವಿವರಗಳು ನನ್ನ ಹತ್ತಿರ ಇಲ್ಲ, ನಾನು ತರಿಸಿ ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆಂದು ಹೇಳಬಯಸುತ್ತೇನೆ.

ಶಿವಮೊಗ್ಗದಲ್ಲಿನ ಕೃಷಿ ಮಹಾವಿದ್ಯಾಲಯ

419. ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗಯಲ್ಲಿ ಕೃಷಿ ಕಾಲೇಜು ಆರಂಭವಾಗಿದ್ದು, ಅದಕ್ಕೆ ಸ್ವಂತ ಭೂಮಿಯಾಗಲಿ, ಕಟ್ಟಡವಾಗಲಿ ಅಧ್ಯಾಪಕರಾಗಲಿ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಬಂದಿದ್ದಲ್ಲಿ, ಕೃಷಿ ಕಾಲೇಜು ಅಭಿವೃದ್ಧಿಗೆ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವುದೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕೃಷಿ ಸಚಿವರು):–

ಅ) ಹೌದು.

ಆ) ಕ್ರಮ ಕೈಗೊಳ್ಳಲಾಗುತ್ತಿದೆ.

ಉಪಾಧ್ಯಕ್ಷಿಣಿಯವರು:– ಇನ್ನು 10 ನಿಮಿಷ ಮಾತ್ರ ಇದೆ. ಯಾರು ಪ್ರಶ್ನೆ ಹಾಕಿದ್ದಾರೆ ಅವರಿಗೆ ಮಾತ್ರ ಸಪ್ಲಿಮೆಂಟರಿ ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ ಇಲ್ಲವಾದಲ್ಲಿ ಎಲ್ಲವನ್ನೂ ಲ್ಯಾಪ್ಸ್ ಮಾಡುತ್ತೇನೆ. ತಾವೆಲ್ಲರೂ ಕೋ ಆಪರೇಟ್ ಮಾಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ:– ಯಾವ ರೀತಿ ಮಾನ್ಯ ಕೃಷಿ ಮಂತ್ರಿಗಳು ನಿಧಾನ ಉತ್ತರ ಕೊಡುತ್ತಿದ್ದಾರೆ ಅದೇ ರೀತಿ ಶಿವಮೊಗ್ಗ ಜಿಲ್ಲೆಯಿಂದ ಬಂದಿರುವ ನನ್ನ ಸ್ಥಿತಿ ಕೂಡ ಇದೆ. ಸ್ವಾತಂತ್ರ್ಯ ಬಂದಾಗಿನಿಂದ ಇವತ್ತಿನವರೆಗೂ ಇಡೀ ರಾಜ್ಯದ ರಾಜಕೀಯ ಇತಿಹಾಸವನ್ನು ಬದಲಾವಣೆ ಮಾಡುವಂತಹ ಪ್ರಮುಖ ಮಂತ್ರಿಗಳೇ ನಮ್ಮ ಜಿಲ್ಲೆಯವರು ಇದ್ದರು ಅಥವಾ ಜೆ.ಹೆಚ್. ಪಟೇಲ್ ಇರಬಹುದು ಮಾಧವರಾಯರು ಇರಬಹುದು ಇಲ್ಲವೇ ಮೊನ್ನೆ ತನಕ ಮುಖ್ಯಮಂತ್ರಿಗಳಾಗಿದ್ದಂತಹ ಬಂಗಾರಪ್ಪನವರು ಇರಬಹುದು ಒಂದೇ ಒಂದು ಅಭಿವೃದ್ಧಿ ಕಾರ್ಯ ಆಗಿಲ್ಲ. ಮಾನ್ಯ ಬಂಗಾರಪ್ಪನವರು ಮುಖ್ಯ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ .....

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– ಇದು ಸರಿಯಲ್ಲ ಜೆ.ಹೆಚ್. ಪಟೇಲ್‌ರವರು ಇದ್ದಾಗ ಅಭಿವೃದ್ಧಿ ಆಗಲಿಲ್ಲವೆಂದು ಹೇಳುವುದು ಸರಿಯಲ್ಲ. He is not a member of the House. He cannot take his name.